ದಿನಾಂಕ **30.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ನಾನು ಹಾಜರುಪಡಿಸಿರುವ ದಾಖಲೆಗಳು ನನ್ನ ತಾತನ ಆಸ್ತಿಗೆ ಸಂಬಂಧಿಸಿದ ದಾಖಲೆಗಳು. ಆ ಎಲ್ಲಾ ಆಸ್ತಿಗಳ ಪಹಣಿಗಳು ನನ್ನ ದೊಡ್ಡಮ್ಮನಾದ ಅನುಸೂಯರವರ ಹೆಸರಿನಲ್ಲಿ ಇರುತ್ತದೆ. ನನ್ನ ತಾತ ತೀರಿಕೊಂಡ ನಂತರ ಪೌತಿ ಖಾತಾ ಆದಾರದಲ್ಲಿ ಬದಲಾವಣೆ ಆಗಿರುತ್ತದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ವೇಳೆ ನೋಡಿರುತ್ತೇನೆ. ನನ್ನ ತಾಯಿ ತೀರಿಕೊಂಡು 17 ವರ್ಷ ಆಗಿರುತ್ತದೆ. ನನ್ನ ತಾಯಿಗೆ 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಂದೆ ತೋಟಗಾರಿಕಾ ಇಲಾಖೆಯ ಅಧಿಕಾರಿ ಆಗಿದ್ದರು ಎಂದರೆ ಸರಿ. ನನ್ನ ಕುಟುಂಬ ಬೆಂಗಳೂರಿನಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ನಾವು 12 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇವೆ. ನನ್ನ ದೊಡ್ಡಮ್ಮ ತೀರಿಕೊಂಡು ಸುಮಾರು 55 ವರ್ಷ ಆಗಿರುತ್ತವೆ ಎಂದರೆ ಇರಬಹುದು. ನನ್ನ ಮತ್ತೊಬ್ಬ ದೊಡ್ಡಮ್ಮ ಸರೋಜಮ್ಮ ತೀರಿಕೊಂಡು ಸುಮಾರು 10 ವರ್ಷಗಳಾಗಿರುತ್ತವೆ ಎಂದರೆ ಸರಿ. ನನ್ನ ತಾತ ಕಾಳಪ್ಪ ತೀರಿಕೊಂಡಾಗ ನಾವುಗಳು ಹುಟ್ಟಿರಲಿಲ್ಲ. ಅವರಿಗೆ ಹೃದಯದ ಕಾಯಿಲೆಯಿಂದ ತೀರಿಕೊಂಡಿರುತ್ತಾರೆ ಎಂದರೆ ಟಿಬಿ ಕಾಯಿಲೆಯಿಂದ ತೀರಿಕೊಂಡಿರುತ್ತಾರೆ. ಅನುಸೂಯಮ್ಮ ನನ್ನ ತಾತ ಮತ್ತು ಆತನ ಹೆಂಡತಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿ ಅವರೊಂದಿಗೆ ದೊಡ್ಡಮ್ಮ ಸರೋಜಮ್ಮನು ವಾಸವಾಗಿದ್ದರು.

ಸರೋಜಮ್ಮನನ್ನು ಹೊಳೆನರಸೀಪುರ ತಾಲ್ಲೂಕಿನ ಕೆರಗೋಡು ಗುಡ್ಡನಹಳ್ಳಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಸರೋಜಮ್ಮ ಮತ್ತು ಉಳಿದ ಚಿಕ್ಕಮ್ಮ ಮತ್ತು ದೊಡ್ಡಮ್ಮನವರು ಕಾಳೇನಹಳ್ಳಿಯಲ್ಲಿ ವಾಸ ಇದ್ದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ತಾತ ಕಾಳಪ್ಪ ಶಿಕ್ಷಕರಾಗಿ ನಿವೃತ್ತಿಹೊಂದಿದ್ದರು ಎಂದರೆ

ಸರಿ. ಅನುಸೂಯಮ್ಮನಿಗೆ ಅವರ ತಂದೆ ಕಾಳಪ್ಪ ಮರಣ ಶಾಸನವನ್ನು ಬರೆದು ಆಸ್ತಿಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕಾಳಪ್ಪ ಮತ್ತು ಕೆಂಪಮ್ಮ ಅವರ ಜಮೀನುಗಳನ್ನು ಮತ್ತು ಅವರ ಕುಟುಂಬದ ಆಗುಹೋಗುಗಳನ್ನು ಅನುಸೂಯಮ್ಮ ಮತ್ತು ಆಕೆಯ ಗಂಡ ನೋಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಮರಣ ಶಾಸನದ ಆದಾರದಲ್ಲಿ ಅನುಸೂಯಮ್ಮನ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ಸೂಮಾರು 50 ವರ್ಷಗಳಿಂದ ತಿಳಿದಿದೆ ಎಂದರೆ ಸರಿಯಲ್ಲ. ಮರಣಶಾಸನಕ್ಕೆ ನನ್ನ ತಾಯಿ ಇಂದ್ರಮ್ಮ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಕಾಳೇನಹಳ್ಳಿಯ ನಾರಾಯಣಸ್ವಾಮಿರವರು ನನಗೆ ಗೊತ್ತಿಲ್ಲ ಅವರು ಪಂಚಾಯ್ತಿಯ ಅಧ್ಯಕ್ಷರಾಗಿದ್ದು ಗೌರವಾನ್ವಿತ ವ್ಯಕ್ತಿ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೆ ಪಿ ನಂಜಪ್ಪನವರು ಸಹ ಶಿಕ್ಷಕರು ಆಗಿದ್ದು ಊರಿನ ಮುಂಖಡರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮರಣ ಶಾಸನದ ಆದಾರದಲ್ಲಿ ಬಂದ ಆಸ್ತಿಗಳಿಗೆ ನಮಗೆ ಯಾವುದೇ ಹಕ್ಕು ಮತ್ತು ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನದಲ್ಲಿ ಬಂದ ಆಸ್ತಿಗಳ ಮೇಲೆ ಕ್ರಯ ಮತ್ತು ಖುಲಾಸೆ ವ್ಯವಹಾರಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

Sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.